


## ಸಿನಿಮಾ ಮೌಲ್ಯಮಾಪನ

'ಸುಧಾ' ಮೇ 3.2018ರ ಸಂಚಿಕೆಯ ಚ.ಹ.ರಘುನಾಥ ಅವರ ಮುಖಪುಟ ಲೇಖನ 'ಕನ್ನಡ ಸಿನಿಮಾ 4000' ಮನ ಸೆಳೆಯಿತು. ಕನ್ನಡ ಚಿತ್ರರಂಗದ ಇತಿಹಾಸ, ಸಿನಿಮಾಗಳಿಗೆ ಸಿಕ್ಕ ಪುರಸ್ಕಾರ ಮತ್ತು ಅವುಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಒಳ್ಳೆಯ ಮೌಲ್ಯಮಾಪನ ಮಾಡಿದಂತಿದೆ.

—ಕೆ.ಪಿ.ರಾಮಗುಂಡಿ ಬೈಲಹೊಂಗಲ

ಕನ್ನಡ ಸಿನಿಮಾ 4000 ಚಿತ್ರಗಳನ್ನು ಕೊಟ್ಟ ನಿರ್ದೇಶಕ ಎಂ.ಆರ್.ವಿಠಲ್, ಟಿ.ವಿ.ಸಿಂಗ್ ಠಾಕೂರ ಅವರನ್ನು ಖ್ಯಾತ ಚಿತ್ರ ನಿರ್ಮಾಣ ಸಂಸ್ಥೆಗಳನ್ನು ಸ್ಮರಿಸಬೇಕಿತ್ತು. ವರನಟ ರಾಜಕುಮಾರ್ ಅವರ ಚಿತ್ರಣ ಇಮ್ಮಡಿಯಾಯಿತು.

—ಮುಕುಂದ ಹೆರಕಲ್ಲ, ಕಲಬುರ್ಗಿ

ಅಪೂರ್ಣ ಮಾಹಿತಿಯುಳ್ಳ ಲೇಖನ. ಖಳನಟರು, ಪೋಷಕ ನಟರೂ ಮುಖ್ಯವಾಗುತ್ತಾರೆ. ಆ ನಟರನ್ನೂ ಈ ಲೇಖನದಲ್ಲಿ ಹೇಳಿಲ್ಲ. ವಜ್ರಮುನಿ ಅವರ ಒಂದು ಚಿತ್ರವಾದರೂ ಮುದ್ರಿತವಾಗಿದೆ. ಇನ್ನು ಪೋಷಕ ಪಾತ್ರಗಳನ್ನು ಬೆಳೆಸಿದವರಲ್ಲಿ ಕೆ.ಎಸ್.ಅಶ್ವಥ್ ಅದ್ವಿತೀಯ ನಟರು.

-ಕೆ.ಎಸ್.ಸೋಮೇಶ್ವರ

'ಪೂರ್ವ ಸೂರಿಗಳನ್ನು ನೆನಪಿಸಿಕೊಳ್ಳೋಣ..'ದಲ್ಲಿ (ಬಿ.ಎಂ.ಹನೀಫ್) ಜಯಮಾಲಾ ಅವರ ದುಗುಡ, ದುಮ್ಮಾನಕ್ಕೆ ಕಾರಣ ತಿಳಿಯಲಿಲ್ಲ.

—ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

## ಹೊನ್ನಕ್ಕಿ ಮಾಹಿತಿ

'ಹೊನ್ನಕ್ಕಿಯ ಕಲರವ' ಲೇಖನವನ್ನು ಎಸ್.ವಿ.ಶ್ರೀನಿವಾಸಮೂರ್ತಿ ಮಾಹಿತಿಪೂರ್ಣವಾಗಿ ಬರೆದಿದ್ದಾರೆ. ಚಿತ್ರಗಳೂ ಚೆನ್ನಾಗಿದ್ದವು.

—ರತ್ನಾಕರ ಹೆಗಡೆಕಟ್ಟೆ ಮೂಡಬಿದಿರೆ

## ಕೈಗೆ ಬಡಗಿ ಬೇಕು

ನಿಮ್ಮೊಡನೆ 'ಮಹಿಳೆಯರೇಕೆ ಕಡಿಮೆ?' (ಎನ್.ಉದಯಕುಮಾರ್) ಪ್ರಶ್ನೆ ಪುರುಷ ರಾಜಕಾರಣಿಗಳ ತಲೆ ತಿನ್ನುತ್ತದೆ. ಮಹಿಳೆಯರ ಕೈಯಲ್ಲಿ ಬಡಿಗೆ ಬರಬೇಕಿದೆ.

—ರಾಜಶೇಖರ ಹಾದಿಮನಿ, ಧಾರವಾಡ

## ಅದ್ಭುತ ಕೋಟೆಗಳು

ಮಹರಾನ್‌ಗಢದ ಕೋಟೆ (ಜಿ.ಆರ್.ಪಂಡಿತ್ ಸಾಗರ) ಮತ್ತು ಕಲಬುರ್ಗಿಯ ಕೋಟೆಯೊಳಗಿರುವ ನೂರಾರು ಕಮಾನುಗಳ ವಿಶಾಲ ಮಸೀದಿ ಕುರಿತ 'ವಾಸ್ತು ವಿನ್ಯಾಸದ ಬೆರಗು' (ವೆಂಕಟೇಶ್ ಮುದಗಲ್) ಸಚಿತ್ರ ಬರಹ ಚಿತ್ತಾಕರ್ಷಕವಾಗಿದ್ದವು.

—ಪಿ.ಜಯವಂತ ಪೈ ಕುಂದಾಪುರ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಹೇಮಾ ಸುಬ್ರಹ್ಮಣ್ಯ ಆಗುಂಬೆ.

## ವಿಡಂಬನೆ

ವಿಠಲ ಗಟ್ಟಿ ಉಳಿಯ ಅವರ ಕಥೆ 'ತಲೆ ಮಾಂಸ' ಮೂಢನಂಬಿಕೆಗಳನ್ನು ವಿಡಂಬನಾತ್ಮಕವಾಗಿ ನೋಡಿರುವುದು ಇಷ್ಟವಾಯಿತು.

—ಕೊಹಿಮ ಬಸರಕೋಡು

## ಉತ್ತರ ಸಿಕ್ಕಿತು

ಡಾ.ಕೆ.ಎಸ್.ಚೈತ್ರಾ ಅವರ 'ಮಕ್ಕಳ ಬಾಯಲ್ಲಿ ಬೈಗುಳ'ದಲ್ಲಿ ಕೆಟ್ಟ ಮಾತುಗಳನ್ನು ಮಕ್ಕಳು ಎಲ್ಲಿ ಕಲಿಯುತ್ತಾರೆ ಎನ್ನುವ ಪೋಷಕರ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ.

—ಮೀನಾಕ್ಷಿ ಕೆ.ರಾಮಗುಂಡಿ ಬೈಲಹೊಂಗಲ

